> ಚರಿತ್ರೆಯ ಬರವಣಿಗೆ ಪುರುಷ ಚಿಂತನೆಯದಾಗಿದ್ದರೆ ಅಲ್ಲಿ ಪುರುಷ ಕೇಂದ್ರದಲ್ಲಿರುತ್ತಾನೆ ಹೊರತು ಮಹಿಳೆಯರಲ್ಲ. ಕೆಲವೇ ಮಹಿಳೆಯರು ಮಾತ್ರ ಇತಿಹಾಸದಲ್ಲಿ ಯಾಕೆ ಕಾಣಿಸಿಕೊಂಡರು ಅನ್ನೋದನ್ನ ನೋಡಬೇಕು. ಪ್ರಶ್ನೆ ಕೇಳಬೇಕಾಗಿರುವುದು ಎಷ್ಟು ಜನ ಮಹಿಳೆಯರಿದ್ದಾರೆ ಅಂತಲ್ಲ, ಅವರು ಮಾತ್ರ ಯಾಕಿದ್ದಾರೆ ಅಂತ.

ಸೇರಿದೆ... ನನ್ನಣ್ಣನನ್ನು ಕಾಲೇಜು ಓದಿಸಲು ಬೆಂಗಳೂರಲ್ಲಿ ಮನೆ ಮಾಡಿದರು. ಬೆಂಗಳೂರಿಗೆ ಬಂದಿದ್ದರಿಂದ ಕಾಲೇಜಿಗೆ ಹೋಗಬೇಕು ಅನ್ನಿಸಿ ಹಟ ಹಿಡಿದೆ. ಎಂಟು ದಿನ ಉಪವಾಸ ಮಾಡಿದ ಮೇಲೆ ಕೊನೆಗೆ ಮನೆಯಲ್ಲಿ ಒಪ್ಪಿದರು. ನನ್ನಣ್ಣ ನನಗೆ ಒತ್ತಾಸೆಯಾಗಿ ನಿಂತು ಒಂದೆರಡು ಕಾಲೇಜುಗಳಿಗೆ ಅಪ್ಲಿಕೇಶನ್ ತಂದ. ನನ್ನ ಸೋದರಮಾವನ ಮಗಳು ಹೋಂಸೈನ್ಸ್‌ನಲ್ಲಿ ಬಿ.ಎಸ್ಸಿ. ಮಾಡಿದ್ದಳು. ಕಾಲೇಜಿಗೆ ಹೋಗೋದಾದ್ರೆ ಹೋಗು ಆದ್ರೆ ಹೋಂಸೈನ್ಸ್ ಓದು ಅಂತ ಕಳಿಸಿದರು. ಹೀಗೆ ಬಿ.ಎಸ್ಸಿ. ಮುಗೀತು. ಮುಂದೆ ಎಂ.ಎ. ಕೂಡ ಆಕಸ್ಮಿಕ. ಕನ್ನಡದಲ್ಲಿ ಹೆಚ್ಚು ಅಂಕ ಬಂದಿತ್ತು. ಸರಿ ನಮ್ಮ ಕನ್ನಡ ಮೇಷ್ಟ್ರು ಎಂ.ಎ. ಮಾಡಲು ಸೂಚಿಸಿದರು. ಹಾಗೆ ಕನ್ನಡ ಎಂ.ಎ. ಮಾಡಿದೆ.

◆ **ಹೆಣ್ಣುಮಕ್ಕಳ ಶಿಕ್ಷಣ ಅವರ ಬದುಕಿಗೆ ಪೂರಕವಾಗಿದೆಯೇ? ಶಿಕ್ಷಣ ಎನ್ನುವುದು ಎಷ್ಟರಮಟ್ಟಿಗೆ ಬಿಡುಗಡೆ ತಂದುಕೊಟ್ಟಿದೆ?**

ಹೆಣ್ಣುಮಕ್ಕಳ ಕಾಲೇಜು ಶಿಕ್ಷಣ ಎನ್ನುವುದೊಂದು ದೊಡ್ಡ ಪಾಲಿಟಿಕ್ಸ್. ಈಗ ಸಿಗುತ್ತಿರುವ ಶಿಕ್ಷಣ ಅನ್ನೋದು ಪಿತೃಪ್ರಧಾನತೆಯ ಶಿಕ್ಷಣ. ಅಲ್ಲಿನ ಮೌಲ್ಯಗಳನ್ನೇ ಇಲ್ಲಿ ಹರಡಲಾಗುತ್ತದೆ. ಎಷ್ಟೇ ಪದವಿಗಳನ್ನ ಗಳಿಸಿದರೂ ಅದು ನಮ್ಮನ್ನು ತರಬೇತು ಮಾಡುತ್ತಿರುವುದು ಪಿತೃಪ್ರಧಾನತೆಯ ವ್ಯವಸ್ಥೆಗೆ ಅನುಗುಣವಾಗಿ ಬದುಕಲು. ಕಲಿಕೆಗೂ ವೃತ್ತಿಗೂ ಕಲಿಕೆಗೂ ಬದುಕಿಗೂ ಕಂದರವಿದೆ. ಇದು ಹೆಣ್ಣು ಗಂಡಿಗೆ ಇಬ್ಬರಿಗೂ ಅನ್ವಯವಾಗುತ್ತೆ. ಎಷ್ಟೇ ಓದಿದರೂ ಮದುವೆಯಾಗಿ, ತಾಯಿಯಾಗಿ ಹೀಗೆ ವಿಭಿನ್ನ ಪಾತ್ರಗಳಿಗೆ ಹೆಣ್ಣುಮಕ್ಕಳು ಮಾನಸಿಕವಾಗಿ ಹೊಂದಿಕೊಳ್ಳುತ್ತ ಹೋಗುತ್ತಾರೆ. ಹೆಣ್ಣು ಮಕ್ಕಳು ಎಷ್ಟೇ ಓದಿದ್ದರೂ ಈ ಲಿಂಗಾಧಾರಿತ ರೂಢಿಗತ ಪಾತ್ರಗಳ ನಿರ್ವಹಣೆಯಿಂದ ಹೊರಬರಲಾಗುವುದಿಲ್ಲ. ಗಂಡಿಗೂ ಇದು ಅನ್ವಯವಾಗುತ್ತದೆ. ಈ ರೂಢಿಗತ ಮಾದರಿಗಳನ್ನು ದಾಟುವುದು ಎಂದರೆ ಪ್ರಜ್ಞಾವಸ್ಥೆ ಎಚ್ಚರಗೊಳ್ಳುವುದು.

ಈ ಪ್ರಜ್ಞಾವಸ್ಥೆ ಎಚ್ಚರಗೊಳ್ಳದಂತೆ ವ್ಯವಸ್ಥೆ ನಿರಂತರವಾಗಿ ಅದನ್ನು ಅದುಮಿಡುತ್ತಲೇ ಇರುತ್ತದೆ. ಹಾಗಾಗಿ ಕ್ರಮೇಣ ವಿಸ್ಮೃತಿ ಆವರಿಸಿ ನೀವು ಯಾರು ಎನ್ನುವುದನ್ನೇ ಮರೆತುಬಿಡುವಿರಿ. ಯಾವುದೋ ಪ್ರೇರಣೆ, ಅವಕಾಶ ಈ ಪ್ರಜ್ಞೆಯನ್ನು ಜಾಗೃತಗೊಳಿಸಬಹುದು. ಪ್ರಜ್ಞೆ ಜಾಗೃತಗೊಳ್ಳುವುದಕ್ಕೆ ನಿರಂತರ ಪ್ರಯತ್ನವೂ ಬೇಕಾಗುತ್ತೆ. ಈ ಪ್ರಯತ್ನಗಳನ್ನು ಮಾಡಬೇಕು ಅನ್ನಿಸುವುದೇ ಪ್ರಜ್ಞೆ ಜಾಗೃತಿಯಾಗುತ್ತಿದೆ ಅನ್ನುವುದರ ಸೂಚನೆ. ಈಗ ನಾವು ಪಡೆಯುತ್ತಿರುವ ಶಿಕ್ಷಣ ಈ ಜಾಗೃತಿ ಮೂಡಿಸುವಂತೆ ಇಲ್ಲ.

◆ **ನೀವು ಬರವಣಿಗೆ ಆರಂಭಿಸಿದ್ದು ಹೇಗೆ?**

ಚಿಕ್ಕಂದಿನಿಂದಲೂ ಕತೆ, ಕಾದಂಬರಿ ಓದೋ ಹುಚ್ಚಿತ್ತು. ಕನ್ನಡ ಎಂ.ಎ. ಓದಿದ್ದೆ ಅನ್ನೋದು